<u>1 ನೇ ಅಪರ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ</u>
<u>ಎಸ್.ಸಿ. ನಂ. 172/2022</u>

<u>ದಿನಾಂಕ ಃ 18.12.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.</u>

ಸಿ. ಡಬ್ಲ್ಯೂ: 27 ಪಿ. ಡಬ್ಲ್ಯೂ:18

| | |
|---|---|
| ಸಾಕ್ಷಿದಾರರ ಹೆಸರು | ಮುನಿರಾಜು |
| ತಂದೆಯ ಹೆಸರು | ಲೇಟ್ ಕೆಂಚಯ್ಯ |
| ವಯಸ್ಸು | 48 ವರ್ಷ |
| ಉದ್ಯೋಗ | ಮುಖ್ಯ ಪೇದೆ, ಬೆಳಕಾವಾಡಿ ಪೊಲೀಸ್ ಠಾಣೆ. |
| ವಾಸ | ಬೆಳಕವಾಡಿ |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

1. ದಿಃ 30.06.2022 ರಿಂದ ನಾನು ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿಃ 04.08.2022 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಈ ಪ್ರಕರಣದ ಸಂಬಂಧದಲ್ಲಿ ಚಾಸಾ. 30 ರವರು ಆರೋಪಿಯನ್ನು ಪತ್ತೆ ಮಾಡಿ ಹಾಜರು ಪಡಿಸುವಂತೆ ನಿರ್ದೇಶನ ನೀಡಿದ್ದರ ಮೇರೆಗೆ ಸದರಿ ಆರೋಪಿಯ ಪತ್ತೆಗಾಗಿ ಠಾಣೆಯಿಂದ ಹೊರಟು ನೆಟ್ಟಕಲ್ಲು ಗ್ರಾಮಕ್ಕೆ ಹೋಗಿ, ಈ ಪ್ರಕರಣದ ಆರೋಪಿಯ ಬಗ್ಗೆ ವಿಚಾರಿಸಿರುತ್ತೇನೆ. ಆ ದಿನ ಸಂಜೆ 5.30 ಗಂಟೆ ಸಮಯದಲ್ಲಿ ಆರೋಪಿಯು ನೆಟ್ಟಕಲ್ಲು ಗ್ರಾಮದ ಕನಕದಾಸ ಸರ್ಕಲ್ ಬಳಿ ಇದ್ದಾನೆ ಎಂದು ಬಾತ್ಮಿದಾರರ ಮುಖಾಂತರ ಮಾಹಿತಿ ಬಂದ ಮೇರೆಗೆ, ಅಲ್ಲಿ ಗೆ ತೆರಳಿ ಅಲ್ಲಿ ಇದ್ದ ಆರೋಪಿಯನ್ನು ವಶಕ್ಕೆ ಪಡೆದುಕೊಂಡ ನನ್ನ ದ್ವಿಚಕ್ರ ವಾಹನದಲ್ಲಿ ಸದರಿ ಆರೋಪಿಯನ್ನು ಸಂಜೆ 6.00 ಕ್ಕೆ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಚಾಸಾ. 30 ರವರ ಮುಂದೆ ವರದಿಯೊಂದಿಗೆ ಹಾಜರು ಪಡಿಸಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ.42 ಎಂದು, ಸಾಕ್ಷಿಯ ಸಹಿಯನ್ನು ನಿಪಿ.42(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ತಾನು ವಶಕ್ಕೆ ಪಡೆದ, ಚಾಸಾ. 30 ರವರ ಮುಂದೆ ಹಾಜರು ಪಡಿಸಿದ ಆರೋಪಿಯೆಂದು ಸಾಕ್ಷಿಯು ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು ಃ Chief defence counsel ರವರಿಂದ ಃ**

3. ಆರೋಪಿಯ ಪತ್ತೆಗಾಗಿ ಚಾಸಾ. 30 ರವರು ನನಗೆ ಲಿಖಿತ ನಿರ್ದೇಶನ ನೀಡಿಲ್ಲ, ಅವರು ಮೌಖಿಕವಾಗಿ ನಿರ್ದೇಶನ ನೀಡಿರುತ್ತಾರೆ. ನೆಟ್ಟಕಲ್ಲು ಗ್ರಾಮವು ನಮ್ಮ ಠಾಣೆಯಿಂದ 10 ರಿಂದ 12 ಕಿಮೀ ದೂರದಲ್ಲಿ ಇರುತ್ತದೆ. ಆರೋಪಿಯ ಪತ್ತೆಗಾಗಿ ನಾನೊಬ್ಬನೇ ತೆರಳಿದ್ದೆನು. ಆರೋಪಿಯನ್ನು ವಶಕ್ಕೆ ಪಡೆದ ಸ್ಥಳದಲ್ಲಿ ನಾನು ಮಹಜರ್ ಮಾಡಿಕೊಂಡಿಲ್ಲ. ಸದರಿ ಸಮಯದಲ್ಲಿ ಆರೋಪಿಯ ಸಂಬಂಧಿಕರಿಗೆ ಆರೋಪಿಯನ್ನು ವಶಕ್ಕೆ ಪಡೆದ ಬಗ್ಗೆ ತಿಳಿಸಿಲ್ಲ, ಆರೋಪಿಯನ್ನು ವಶಕ್ಕೆ ಪಡೆದ ಸಮಯದಲ್ಲಿ ಗ್ರಾಮಸ್ತರು ಹಾಜರಿದ್ದರು. ನಾನು ಆರೋಪಿಯನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯೇ ತಾನೇ ಖುದ್ದಾಗಿ ಪೊಲೀಸ್ ಠಾಣೆಗೆ ಹಾಜರಾಗಿದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.